**Com.O.S**. 180/2024

**PW**–2

**ಸಾಕ್ಷಿಯನ್ನು ದಿನಾಂಕ 10.12.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀಮತಿ ಎಸ್.ಎ.ಎಂ ವಕೀಲರಿಂದಃ**

ಸಾಲ ಮಂಜೂರಾದ ಬಳಿಕ ಬ್ಯಾಂಕಿನ ಪಾರ್ಕಿಂಗ್ ಖಾತೆಯಲ್ಲಿ ಹಣ ಜಮೆ ಮಾಡಿ ನಂತರ ಪ್ರತಿವಾದಿಯ ವೆಂಡರ್ ಗೆ ಪಾವತಿ ಮಾಡಿರುತ್ತೇವೆ. ಪಾರ್ಕಿಂಗ್ ಖಾತೆ ಆರ್.ಐ.ಇ ಶಾಖೆಯದ್ದು ಇರುತ್ತದೆ. ನ್ಯೂ ಎಸ್.ಡಿ.ಎಂ ಎಂಟರಪ್ರೈಸಸ್ ಗೆ ಆರ್.ಟಿ.ಜಿ.ಎಸ್ ಮೂಲಕ ಹಣ ಪಾವತಿ ಮಾಡಿರುತ್ತೇವೆ. ನಿಪಿ9 ಮತ್ತು 10 ಡೆಬಿಟ್ ಮತ್ತು ಕ್ರೆಡಿಟ್ ವೋಚರ್ಸಗಳು ನಮ್ಮ ಬ್ಯಾಂಕಿನ ಆಂತರಿಕ ವ್ಯವಹಾರಗಳು ಎಂದರೆ ನಿಜ. ದಿನಾಂಕ 27.1.2021 ರಂದು ಎಸ್.ಡಿ.ಎಂ ಎಂಟರಪ್ರೈಸಸ್ ಖಾತೆಗೆ ಹಣ ಪಾವತಿಯಾಗಿದೆ ಎಂದರೆ ನಿಜ. ಎಸ್.ಡಿ.ಎಂ ಎಂಟರಪ್ರೈಸಸ್ ಖಾತೆಯಲ್ಲಿ ಆ ಹಣ ಪಾವತಿಯಾದ ಬಗ್ಗೆ ನಮೂದು ಇರುತ್ತದೆ. ನಿಪಿ12 ರ ಪುಟ ಸಂಖ್ಯೆ 19 ರಲ್ಲಿ ನೆಫ್ಟ್ ಮೂಲಕ ಪಾವತಿಸಿದ ಬಗ್ಗೆ ನಮೂದಿದೆ ಎಂದರೆ ನಿಜ. ನೆಫ್ಟ್ ಮೂಲಕ ಪಾವತಿಸಲು ಸಾಲಗಾರರಿಂದ ಅರ್ಜಿ ಪಡೆಯಬೇಕು ಎಂದರೆ ನಿಜ. ಸಾಕ್ಷಿ ಪುನಃ ಹೇಳುತ್ತಾರೆ ಸಾಲಗಾರರ ಹಣವನ್ನು ವೆಂಡರಿಗೆ ಪಾವತಿ ಮಾಡುವಾಗ ನಾವು ಡೆಬಿಟ್ ವೋಚರ್ ಪಡೆಯುತ್ತೇವೆ. ಮಧ್ಯವರ್ತಿಗಳ ಜೊತೆ ಶಾಮೀಲಾಗಿ ಪ್ರತಿವಾದಿಯ ಗಮನಕ್ಕೆ ಬಾರದೇ ನಾವು ನಾವೇ ವ್ಯವಹಾರ ಮಾಡಿರುವುದರಿಂದ ಪ್ರತಿವಾದಿಯು ದಾವೆಯಲ್ಲಿ ಕೇಳಿರುವ ಹಣ ಪಾವತಿಸಲು ಜವಬ್ದಾರರಲ್ಲ ಎಂದರೆ ಸರಿಯಲ್ಲ. ನಿಪಿ9 ಮತ್ತು 10 ಕ್ಕೆ ನಂತರದಲ್ಲಿ ಪ್ರತಿವಾದಿಯ ಸಹಿ ಪಡೆದಿರುತ್ತೇವೆ ಮತ್ತು ಆ ದಾಖಲೆಗಳ ಬಗ್ಗೆ ಅವರಿಗೆ

ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ನಿಪಿ9 ಪ್ರತಿವಾದಿ ಖಾತೆಯಿಂದ ಪಾರ್ಕಿಂಗ್ ಖಾತೆಗೆ ಹಣ ವರ್ಗಾಯಿಸಿದ ಬಗ್ಗೆ ಸ್ಲಿಪ್ ಇದೆ ಮತ್ತು ನಿಪಿ10 ಮಾರ್ಜಿನ್ ಹಣ ಸೇರಿಸಿ ಪೂರ್ಣ ಹಣವನ್ನು ವೆಂಡರಿಗೆ ಪಾವತಿ ಮಾಡಿದ ಬಗ್ಗೆ ಡೆಬಿಟ್ ಸ್ಲಿಪ್ ಇದೆ. ಪ್ರತಿವಾದಿಯ ಗಮನಕ್ಕೆ ತಾರದೇ ಬ್ಯಾಂಕ್ ಸಿಬ್ಬಂದಿಗಳು ಶಾಮೀಲಾಗಿ ಲಾಭ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಪ್ರತಿವಾದಿಯು ದಾವೆಯಲ್ಲಿ ಹೇಳಿರುವ ಹಣ ಪಾವತಿಸಲು ಬವಬ್ದಾರರಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ.,

2 ನೇ ಅಪರ ಜಿಲ್ಲಾ ಮತ್ತು ಸತ್ತ ನ್ಯಾಯಾಧೀಶರು
ಮೈಸೂರು